ಅಧ್ಯಕ್ಷರು : ಸರ್ಕಾರ ಇದೆ, ಏಕೆ ನೀವು ಗಡಿಬಿಡಿ ಮಾಡುತ್ತೀರಿ? Time waste ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧಿಕಾರಿಗಳು ಒಬ್ಬರೂ ಇಲ್ಲ.

ಅಧ್ಯಕ್ಷರು : ಕಾಗೇರಿ ದಯವಿಟ್ಟು ಕುಳಿತುಕೊಳ್ಳಿ. ನೀವು ಹಿರಿಯರು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧಿಕಾರಿಗಳು ಇಲ್ಲ ಸಚಿವರಿಲ್ಲ, ನೋಡಿ. ಇದು ಸರಿಯಲ್ಲ. ತಾವು ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಬೇಕು. ಸದನವನ್ನು ಮುಂದಕ್ಕೆ ಹಾಕಿ, ಅಧಿಕಾರಿಗಳು ಬರುವುದಕ್ಕೆ ಹೇಳಿ. ಯಾರೂ ಇಲ್ಲ, ಅಧಿಕಾರಿಗಳಿಲ್ಲ, ಮಂತ್ರಿಗಳಿಲ್ಲ, ಹೇಗೆ ಮಾತನಾಡುವುದು?

(ಗೊಂದಲ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಾವು ಇದನ್ನು ವಿರೋಧಿಸಿ ಸಭಾ ತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಸನ್ಮಾನ್ಯ ಸಭಾಧ್ಯಕ್ಷರೆ, ತಾವೇ ನೋಡಿ, ನಿಮ್ಮ ಬಲಗಡೆಗೆ ಒಬ್ಬರೂ ಅಧಿಕಾರಿಗಳಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಏನೋ ಕಾಟಾಚಾರಕ್ಕೆ ಸರ್ಕಾರ ನಡೆಸುತ್ತಿರುವಂತಾಗಿದೆ.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ತಾವು ಬಂದರೂ, ಮುಖ್ಯಮಂತ್ರಿಗಳು ಬಂದರೂ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರು ಬಂದಿಲ್ಲ. ಬೇರೆ ಬೇರೆ ಇಲಾಖೆಯ ಕಾರ್ಯದರ್ಶಿಗಳಿಲ್ಲ.

ಅಧ್ಯಕ್ಷರು : ಸರ್ಕಾರ ಇಲ್ಲೇ ಇದೆ ರೀ. ನೋಡಿ ಬಂದೇ ಬಿಟ್ಟರು. ಚಲುವರಾಯಸ್ವಾಮಿ ನೀವೇ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಅಧ್ಯಕ್ಷರೆ, Zero hour ಇದೆ, ನಾವು ಮಾತನಾಡುತ್ತೇವೆ.